OS 158/2018
PW-1

ದಿನಾಂಕಃ 28-01-2020.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಹೆಸರು ಬಿಹೆಚ್ ಚಂದ್ರಾಚಾರ್. ನಾನು ವ್ಯವಸಾಯ ಮಾಡುತ್ತೇನೆ. ದಾವಾ ಸರ್ವೆ ನಂ 47/5 ರ ವಿಚಾರವಾಗಿ ದಾವೆ ಸಲ್ಲಿಸಿದ್ದೆವು. ಈ ಸ್ವತ್ತು ನನಗೆ ಕ್ರಯದ ಮೂಲಕಬಂತು. ನಾನು ಈ ಸ್ವತ್ತನ್ನು ರಂಗಣ್ಣಾಚಾರ್ ಮತ್ತು ಸಹೋದರರಿಂದ ಖರೀದಿ ಮಾಡಿದ್ದೇನೆ. ರಂಗಣ್ಣಾಚಾರ್ ಅವರ ತಂದೆಗೆ ಆ ಸ್ವತ್ತು ಸರ್ಕಾರದಿಂದ ಬಂತು. ಅದರ ಮೂಲ ಸರ್ವೆ ನಂ. 47/5, ಅದು ಮಂಜೂರಾದಗ ಅದೇ ಸರ್ವೆ ನಂಬರ್‌ನಲ್ಲಿ ಇತ್ತಾ ಎಂದರೆ ಸಾಕ್ಷಿ ಸರಿ ಎನ್ನುತ್ತಾರೆ. ಆ ಸ್ವತ್ತು ಮಂಜೂರಾದಾಗ ಯಾವ ಚೆಕ್ಕುಬಂದಿಯಲ್ಲಿತ್ತು ಮತ್ತು ಆ ಮಂಜೂರಾತಿ ದಾಖಲೆಯನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಮುಂದಿನ ವಿಚಾರಣೆಯಲ್ಲಿ ಹಾಜರುಪಡಿಸುತ್ತೇನೆ. ನಮ್ಮ ಮಾವ ರಂಗಣ್ಣಾಚಾರ್‌ನವರಿಗೆ 4 ಎಕರೆ ಮಂಜೂರಾಗಿದ್ದು, ಅದನ್ನೇ ನಾನು ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ಕ್ರಯದ ಮೊದಲು ಸರ್ವೆ ಸ್ಕೆಚ್‌ನ್ನು ಮಾಡಿಸಲಾಗಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಸ್ವತ್ತಿನ ಚೆಕ್ಕುಬಂದಿ ಪೂಃ ಮಂಜುಶ್ ಬಿನ್ ಜಯರಂಗಪ್ಪ ಪಃ ಜಯಪ್ರಕಾಶ್ ಬಿನ್ ತಿಪ್ಪೆಗೌಢ ಉಃ ರಂಗಣ್ಣ ದಃ ಲಕ್ಷ್ಮಯ್ಯ ಬಿನ್ ಹೆಂಜರೇಗೌಡ ಜಮೀನು ಇದೆ. ಆ ಸ್ವತ್ತು ರಂಗಣ್ಣಾಚಾರ್‌ರವರಿಗೆ ಯಾವಾ ಇಸವಿಯಲ್ಲಿ ಮಂಜೂರಾಯಿತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿರವರು ನಮಗೆ ಯಾವುದೇ ರೀತಿ ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ. ಮಂಜೂರಾದ ಜಮೀನಿನಲ್ಲಿ ಯಾವ ಭಾಗದಲ್ಲಿ ನನ್ನ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಅನಾವಶ್ಯಕವಾಗಿ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.